**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 5002/2025**

**ಸಿ.ಡಬ್ಲ್ಯೂಃ–5 ಪಿ.ಡಬ್ಲ್ಯೂಃ–3**

**ದಿಃ 03.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಆಕಾಶ ಪ್ರಕಾಶ ಕಾಂಬಳೆ |
| ವಯಸ್ಸು | : | 30 ವರ್ಷ. |
| ಉದ್ಯೋಗ | : | ಸರ್ಕಾರಿ ನೌಕರ |
| ವಾಸಸ್ಥಳ | : | ನಿಪ್ಪಾಣಿ. |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ 1 ಮತ್ತು 4 ಗೊತ್ತು. ಆರೋಪಿತರು ಗೊತ್ತು.

2) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಪ್ಪಾಣಿ ಪೋಲಿಸರು ದಿನಾಂಕಃ 03.10.2024 ರಂದು ನಿಪ್ಪಾಣಿಯ ಬೀಮನಗರದ ಮುನಸಿಪಲ ಹೈಸ್ಕೂಲ ಹಿಂಭಾಗದಲ್ಲಿ ಜಲಕುಂಭದ ಬಳಿ ಕರೆಯಿಸಿದ್ದರು. ಅಲ್ಲಿ ಚಾ.ಸಾ.1 ಹಾಜರಿದ್ದು ಗುನ್ನೆ ಜಾಗ ತೋರಿಸಿದ, ಪರಿಶೀಲನೆ ಮಾಡಿ ಮದ್ಯಾಹ್ನ 01 ರಿಂದ 3 ಗಂಟೆ ಸಮಯದಲ್ಲಿ ಪಂಚನಾಮೆ ತಯಾರಿಸಿ ಓದಿ ಹೇಳಿ ಸಹಿ ಪಡೆದರು ಹಾಗೂ ನನಗೀಗ ತೋರಿಸಿದ ಮು.ಮಾ. 6 ರಿಂದ 10 ನೇದ್ದವುಗಳನ್ನು ಜಪ್ತು ಮಾಡಿಕೊಂಡರು. ಸಾಕ್ಷಿ ಪಂಚನಾಮೆ ಹಾಗೂ ತನ್ನ ಸಹಿ ನೋಡಿ

ಗುರುತಿಸಿದ್ದು, ಪಂಚನಾಮೆಯನ್ನು ಈಗಾಗಲೇ ನಿ.ಪಿ.11 ಅಂತಾ ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿ.ಪಿ.11(ಬಿ) ಅಂತಾ ಗುರುತಿಸಲಾಯಿತು. ಪೋಟೋಗಳನ್ನು ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನಿ.ಪಿ.3 ರಿಂದ 8 ಛಾಯಾಚಿತ್ರಗಳನ್ನು ತೋರಿಸಲಾಗಿ, ಸದರಿ ಪಂಚನಾಮೆ ಕಾಲಕ್ಕೆ ತೆಗೆದಿದ್ದಾಗಿ ನೋಡಿ ಗುರುತಿಸುತ್ತಾರೆ.

3) ದಿನಾಂಕಃ 05.10.2024 ರಂದು ನನ್ನ ಹಾಗೂ ಚಾ.ಸಾ.4 ವಿನೋದ ಸಮಕ್ಷಮ ಆರೋಪಿತರು ನಿಪ್ಪಾಣಿಯ ಬಿ. ಇ. ಒ ಕಚೇರಿ ಕಂಪೌಂಡ ಬಳಿ ಮರಾಠಾ ಶಾಲೆಯ ಮುಂಭಾಗದಲ್ಲಿ ಕರೆದುಕೊಂಡು ಹೋಗಿ ಅಲ್ಲಿಯೇ ಕುಳಿತು ಕೊಲೆ ಮಾಡಲು ಸಂಚು ರೂಪಿಸಿದ್ದಾಗಿ ತೋರಿಸಿದರು. ನಂತರ ಮುನಸಿಪಲ ಹೈಸ್ಕೂಲ ಶೆಡ್ ಬಳಿ ಕರೆದುಕೊಂಡು ಹೋಗಿ ಕಾಯುತ್ತಾ ನಿಂತಿದ್ದಾಗಿ ತೋರಿಸಿದರು. ನಂತರ ಮುನಸಿಪಲ್ ಹೈಸ್ಕೂಲ ಹಿಂಭಾಗದಲ್ಲಿ ಕರೆದುಕೊಂಡು ಹೋಗಿ ಅಲ್ಲಿಯೇ ಅಶ್ರಪಅಲಿನನ್ನು ಕೊಲೆ ಮಾಡಿದ್ದಾಗಿ ತೋರಿಸಿದರು. ನಂತರ ಅಲ್ಲಿಂದ ಸ್ವಲ್ಪ ಮುಂದೆ ಗಿಡಗಳಲ್ಲಿ ನನಗೀಗ ತೋರಿಸಿದ ಮು.ಮಾ.2 ಮತ್ತು 5ನೇದ್ದವುಗಳನ್ನು ಬಚ್ಚಿಟ್ಟಿದ್ದು ತೆಗೆದು ತೋರಿಸಿದರು. ಅದೇ ಕಾಲಕ್ಕೆ ನಿ.ಪಿ.23 ರಿಂದ 29 ರಲ್ಲಿ ಕಂಡು ಬರುವ ಮೋಟಾರಸೈಕಲನ್ನು ಅದೇ ಗಿಡದಿಂದ ತೆಗೆದು ಹಾಜರು ಪಡಿಸಿದರು. ಈ ಎಲ್ಲ ಸ್ಥಳಗಳಿಗೆ ಬೇಟಿ ನೀಡಿದಾಗ ಸಮಯ ಸಂಜೆ 04 ರಿಂದ 06.00 ಗಂಟೆಯಾಗಿತ್ತು. ಸಾಕ್ಷಿಗೆ ಪಂಚನಾಮೆ ಹಾಗೂ ತನ್ನ ಸಹಿ ತೋರಿಸಲಾಗಿ

ನೋಡಿ ಒಪ್ಪಿಕೊಂಡಿದ್ದು, ಪಂಚನಾಮೆಯನ್ನು ಈಗಾಗಲೇ ನಿ.ಪಿ.12 ಅಂತಾ ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿ.ಪಿ.12(ಬಿ) ಅಂತಾ ಗುರುತಿಸಲಾಯಿತು. ಅದೇ ಕಾಲಕ್ಕೆ ಛಾಯಾಚಿತ್ರಗಳನ್ನು ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಟ್ಟು 11 ಛಾಯಾಚಿತ್ರಗಳನ್ನು ತೋರಿಸಲಾಗಿ, ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಈಗಾಗಲೇ ನಿ.ಪಿ.13 ರಿಂದ 23 ಅಂತಾ ಗುರುತಿಸಲಾಗಿದೆ.

4) ದಿನಾಂಕಃ 07.10.2024 ರಂದು ನಿಪ್ಪಾಣಿ ಪೋಲಿಸರೊಂದಿಗೆ ಆರೋಪಿತರು ನಮ್ಮನ್ನು ಕೊಲಾಪೂರ ಜಿಲ್ಲೆಯ ಮುಡಶಿಂಗೆ ಗ್ರಾಮಕ್ಕೆ ಕರೆದುಕೊಂಡು ಹೋಗಿ ಹೆಗಡೆಯವರ ಮನೆ ಮುಂದೆ ಇದ್ದ ಒಂದು ಬೈಕನ್ನು ತೋರಿಸಿದಾಗ ಪರಿಶೀಲನೆ ಮಾಡಿ ಜಪ್ತು ಮಾಡಿಕೊಂಡರು. ಸಾಕ್ಷಿಗೆ ಪಂಚನಾಮೆ ಹಾಗೂ ತನ್ನ ಸಹಿ ತೋರಿಸಲಾಗಿ ನೋಡಿ ಒಪ್ಪಿಕೊಂಡಿದ್ದು, ಪಂಚನಾಮೆಯನ್ನು ಈಗಾಗಲೇ ನಿ.ಪಿ.24 ಅಂತಾ ಗುರುತಿಸಲಾಗಿದ್ದು, ಸಾಕ್ಷಿ ಸಹಿ ನಿ.ಪಿ.24(ಬಿ) ಅಂತಾ ಗುರುತಿಸಲಾಯಿತು. ಅದೇ ಕಾಲಕ್ಕೆ ಛಾಯಾಚಿತ್ರಗಳನ್ನು ತೆಗೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಟ್ಟು 5 ಛಾಯಾಚಿತ್ರಗಳನ್ನು ತೋರಿಸಲಾಗಿ, ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಈಗಾಗಲೇ ನಿ.ಪಿ.25 ರಿಂದ 29 ಅಂತಾ ಗುರುತಿಸಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ**

**ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ- ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ದಿನಾಂಕಃ 05.10.2024 ರಂದು 3, 4, 7 ರಿಂದ 11 ನೇ ಆರೋಪಿತರು ಕರೆದುಕೊಂಡು ಹೋಗಿ ತೋರಿಸಿದಂತೆ, ಪರಿಶೀಲನೆ ಮಾಡಿ ಮು.ಮಾ.2, 5ನ್ನು ಜಪ್ತು ಮಾಡಿಕೊಂಡರು ಎಂದರೆ ಸರಿ.

2) ದಿನಾಂಕಃ 07.10.2024 ರಂದು 3, 9ನೇ ಆರೋಪಿತರು ಕರೆದುಕೊಂಡು ಹೋಗಿ ತೋರಿಸಿದಂತೆ, ಪರಿಶೀಲನೆ ಮಾಡಿ ನಿ.ಪಿ.25 ರಿಂದ 29 ರಲ್ಲಿ ಕಂಡು ಬರುವ ಮೋಟಾರಸೈಕಲನ್ನು ಜಪ್ತು ಮಾಡಿಕೊಂಡರು ಎಂದರೆ ಸರಿ.

3) ಈ ಎರಡೂ ಪಂಚನಾಮೆಗಳ ಕಾಲಕ್ಕೆ ನನ್ನ ಜೊತೆ ಚಾ.ಸಾ.4 ಕೂಡ ಹಾಜರಿದ್ದು ಸಹಿ ಮಾಡಿದ್ದಾನೆ ಎಂದರೆ ಸರಿ.

**ಪಾಟೀ ಸವಾಲುಃ- 5, 7 ರಿಂದ 9ನೇ ಆರೋಪಿತರ ಪರ:- ಶ್ರೀ ಎಮ್. ಬಿ. ಪಿ. ವಕೀಲರಿಂದಃ-**

1) ಈ ಎರಡೂ ಪಂಚನಾಮೆಗಳನ್ನು ಯಾರು ಟೈಪ ಮಾಡಿದರು ಹಾಗೂ ಅವುಗಳಲ್ಲಿ ಎನು ಬರೆದಿದೆ ಅಂತಾ ನನಗೆ ವಿಷಯ ಗೊತ್ತಿಲ್ಲ ಎಂದರೆ ಸರಿ. ಇದೇ ರೀತಿ ಪಂಚನಾಮೆ ಬರೆಯಬೇಕು ಅಂತಾ ನಾವೇನು

ಪೋಲಿಸರಿಗೆ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿ. ಮೇಲೆ ಹೇಳಿದಂತೆ ನನ್ನ ಸಮಕ್ಷಮ ಯಾವುದೇ ಆರೋಪಿತರು ಯಾವುದೇ ಸ್ಥಳಗಳಿಗೆ ಕರೆದುಕೊಂಡು ಹೋಗಿಲ್ಲ, ಆಯಾ ಸ್ಥಳಗಳನ್ನು ಪರಿಶೀಲನೆ ಮಾಡಿ, ಮು.ಮ.2, 5, ಹಾಗೂ ನಿ.ಪಿ.25 ರಿಂದ 29 ರಲ್ಲಿ ಕಂಡು ಬರುವ ಮೋಟಾರಸೈಕಲನ್ನು ಆರೋಪಿತರು ತೋರಿಸಿದಂತೆ ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇದ್ದರೂ ಕೂಡಾ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2) ಯಾವ ಪೋಟೋಗ್ರಾಫರ ಹಾಗೂ ಯಾವ ಸ್ಟುಡಿಯೋದಿಂದ ಬಂದು ಪೋಟೋಗಳನ್ನು ತೆಗೆದ ಅಂತಾ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ.

3) ಪೋಲಿಸರು ಸಹಿ ಮಾಡು ಎಂದಿದ್ದರಿಂದ ಮಾಡಿದ್ದೇನೆ ಎಂದರೆ ಸರಿ. ನನಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಉಳಿದ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿಕೊಂಡಿದ್ದು, ಆ ಪ್ರಕಾರ ಪರಿಗಣಿಸಲಾಯಿತು.

**ಮರು ವಿಚಾರಣೆ** : ಇರುವುದಿಲ್ಲ.

(ಈ ಸಾಕ್ಷಿಯ ಸಾಕ್ಷ್ಯದ ಸಮಯದಲ್ಲಿ 1 ರಿಂದ 5, 7, 8 ನೇ ಆರೋಪಿತನನ್ನು ಕಾರಾಗೃಹದಿಂದ ವಿ. ಸಿ. ಮೂಲಕ ಹಾಜರಪಡಿಸಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.